ನರೇಗಾ ಯೋಜನೆ ಅಡಿಯಲ್ಲಿ ಅವ್ಯವಹಾರ

2444(2893); ಡಾ॥ ಅಜಯ ಸಿಂಗ್ (ಜೇವರ್ಗಿ)

ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಲಬುರ್ಗಿ ಜಿಲ್ಲೆಗೆ 2012–13 ಮತ್ತು 2014–15ನೇ ಸಾಲಿಗೆ ತಾಲ್ಲೂಕುವಾರು ಬಿಡುಗಡೆಯಾದ ಹಾಗೂ ವೆಚ್ಚವಾದ ಅನುದಾನ ಎಷ್ಟು;

ಆ) ಈ ಯೋಜನೆಯಡಿ ಅವ್ಯವಹಾರ ಎಸಗಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು; ಅವ್ಯವಹಾರದ ಮೊತ್ತವೆಷ್ಟು;

ಇ) ಅವ್ಯವಹಾರ ಎಸಗಿರುವವರ ಮೇಲೆ ಸರ್ಕಾರ ಯಾವ ಕ್ರಮ ಜರುಗಿಸಿದೆ;

ಈ) 2014–15ನೇ ಸಾಲಿಗೆ ತಾಲ್ಲೂಕುವಾರು ಕ್ರಿಯಾಯೋಜನೆಗೆ ಅನುಮೋದಿಸಿದ ಮೊತ್ತ ಎಷ್ಟು;

ಉ) ತಾಲ್ಲೂಕುವಾರು ಉದ್ಯೋಗ ಚೀಟಿ ನೀಡಿದ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ; ನಿರುದ್ಯೋಗ ಭತ್ಯೆ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾ. ಅ. ಮತ್ತು ಪಂ. ರಾಜ್ ಸಚಿವರು)

ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಲಬುರ್ಗಿ ಜಿಲ್ಲೆಗೆ 2012–13 ಮತ್ತು 2014–15ನೇ ಸಾಲಿಗೆ ತಾಲ್ಲೂಕುವಾರು ಬಿಡುಗಡೆಯಾದ ಹಾಗೂ ವೆಚ್ಚವಾದ ಅನುದಾನ ವಿವರಗಳು ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ತಾಲೂಕು	2012–13		2014–15	
		ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
1.	ಅಫಜಲಪೂರ	1098.23	1027.17	1643.29	1524.95
2.	ಆಳಂದ	1463.61	1267.90	1548.18	1459.28
3.	ಚಿಂಚೋಳಿ	1322.41	1178.07	1578.33	1583.05
4.	ಚಿತ್ತಾಪೂರ	1238.49	1075.55	591.29	433.5
5.	ಕಲಬುರಗಿ	985.17	814.26	994.25	959.84
6.	ಜೇವರ್ಗಿ	2005.60	1933.45	805.11	809.34
7.	ಸೇಡಂ	315.47	158.22	305.26	261.59
ಒಟ್ಟು		8428.98	7454.62	7465.71	7031.56

ಆ) ಕಲಬುರ್ಗಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅವ್ಯವಹಾರ ಎಸಗಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಂಖ್ಯೆ 55. ಸದರಿಯವರು ರೂ. 33.84 ಲಕ್ಷ ಮೊತ್ತದಷ್ಟು ಅವ್ಯವಹಾರವೆಸಗಿರುತ್ತಾರೆ.

ಇ) ಅವ್ಯವಹಾರ ಎಸಗಿರುವವರ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಹಾಗೂ ಗುರುತರ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.

ಈ) ಮತ್ತು ಉ) ಕಲಬುರ್ಗಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2014–15ನೇ ಸಾಲಿಗೆ ಅನುಮೋದಿಸಿದ ಕ್ರಿಯಾಯೋಜನೆಯ ಮೊತ್ತ, ವಿತರಿಸಿದ ಉದ್ಯೋಗ ಚೀಟಿಗಳ ಸಂಖ್ಯೆ, ಕೂಲಿ ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ ಹಾಗೂ ನಿರುದ್ಯೋಗ ಭತ್ಯೆ ಪಡೆದ ಫಲಾನುಭವಿಗಳ ಸಂಖ್ಯೆಯ ತಾಲ್ಲೂಕುವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ.

ಅನುಬಂಧ

ಕಲಬುರ್ಗಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2014–15ನೇ ಸಾಲಿಗೆ ಕ್ರಿಯಾಯೋಜನೆಗೆ ಅನುಮೋದಿಸಿದ ಮೊತ್ತ, ವಿತರಿಸಿದ ಉದ್ಯೋಗ ಚೀಟಿಗಳ ಸಂಖ್ಯೆ, ಕೂಲಿ ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ ಹಾಗೂ ನಿರುದ್ಯೋಗ ಭತ್ಯೆ ಪಡೆದ ಫಲಾನುಭವಿಗಳ ಸಂಖ್ಯೆಯ ತಾಲ್ಲೂಕುವಾರು ವಿವರಗಳು

ಕ್ರಸಂ	ತಾಲ್ಲೂಕು	2014–15ನೇ ಸಾಲಿಗೆ ಅನುಮೋದಿಸಿದ ಕ್ರಿಯಾಯೋಜನೆಯ ಮೊತ್ತ (ರೂ.ಲಕ್ಷಗಳಲ್ಲಿ)	ವಿತರಿಸಿದ ಉದ್ಯೋಗ ಚೀಟಿಗಳ ಸಂಖ್ಯೆ	ಕೂಲಿ ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ	ನಿರುದ್ಯೋಗ ಭತ್ಯೆ ಪಡೆದ ಫಲಾನುಭವಿಗಳ ಸಂಖ್ಯೆ
-1-	-2-	-3-	-4-	-5-	-6-
1	ಅಫಜಲಪೂರ	4471.1	39526	2108	0
2	ಆಳಂದ	2739.78	66830	6918	0
3	ಚಂಚೋಳಿ	4404.49	50087	8958	0
4	ಚಿತ್ತಾಪೂರ	2125.52	38770	2403	46
5	ಕಲಬುರಗಿ	2878.11	38938	6484	0
6	ಜೇವರ್ಗಿ	2805.98	58180	5721	0
7	ಸೇಡಂ	618.55	19183	959	0
ಒಟ್ಟು		20043.53	311514	33551	46

ಗ್ರಾಮೀಣಾಭಿವೃದ್ಧಿ ಆಯುಕ್ತರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು